19	ಕಲ್ಲೊಳ್ಳಿ	28	ಸಂಕೇಶ್ವರ
20	ಕಣಬರಗಿ	29	ಶಿಸಿ
21	ಕವಡಿಮಟ್ಟಿ	30	ಶಿಸಿ (ಮೆಣಸು)
22	ಮಾಳನೂರು	31	ಸಿರಗುಪ್ಪ
23	ಮುಗದ	32	ತೊಡಗುಂದಿ
24	ಮಂಡಗೊಡ	33	ರಡ್ಡೇವಾಡಗಿ
25	ನಿಪ್ಪಾಣಿ	34	ಮುಧೋಳ
26	ಪ್ರಭುನಗರ	35	ಸೌಂದಲಗಾ
27	ರಾಯಚೂರು	36	ಮದರಖಂಡಿ

124 (93) ಶ್ರೀ ಜಯಪ್ರಕಾಶ್ ಹೆಗ್ಗಡೆ (ಬ್ರಹ್ಮಾವರ) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) 2005–06ನೇ ಮತ್ತು 2006–07ನೇ ವರ್ಷದಲ್ಲಿ ಕೈಗೊಂಡ 12ನೇ ಹಣಕಾಸು ಯೋಜನೆಯ ಕುಡಿಯುವ ನೀರಿನ ಟಾಸ್ಕ್‌ಫೋರ್ಸ್‌ನಿಂದ ಪೂರ್ಣಗೊಂಡ ಕಾಮಗಾರಿಗೆ ಹಣ ಬಿಡುಗಡೆಯಾಗಿದೆಯೇ ? ಉಡುಪಿ ತಾಲ್ಲೂಕಿನ ಕ್ಷೇತ್ರವಾರು ವಿವರ ನೀಡುವುದು ,

ಆ) ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 12ನೇ ಹಣಕಾಸು ಆಯೋಗದಡಿ, ಕುಡಿಯುವ ನೀರು ಯೋಜನೆಗಳ ನಿರ್ವಹಣೆ ಮತ್ತು ಅಂತರ್ಜಲ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ವಿನಿಯೋಗಿಸಬಹುದಾಗಿದೆ 2005–06 ಮತ್ತು 2006–07ರ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರವಾರು ಟಾಸ್ಕ್‌ಫೋರ್ಸ್‌ನಡಿ ಅನುಷ್ಠಾನವಾದ ಕಾಮಗಾರಿಗಳು ಮತ್ತು ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ

ಕ್ರ ಸಂ	ಕ್ಷೇತ್ರ	ಕೈಗೊಂಡ ಕಾಮಗಾರಿಗಳ ಮೊತ್ತ	ಈಗಾಗಲೇ ಬಿಡುಗಡೆ ಮಾಡಿದ ಅನುದಾನ	ಬಿಡುಗಡೆ ಮಾಡಬೇಕಾದ ಬಾಕಿ ಅನುದಾನ
1	ಉಡುಪಿ	93 61	44 135	49 475
2	ಕಾಪು	48 84	44 165	4 675
3	ಬ್ರಹ್ಮಾವರ	120 18	36 505	83 675
	ಒಟ್ಟು	262 63	124 805	137 825

ಆ) ವಾಸ್ತವವಾಗಿ ಅನುಮೋದನೆಯಾಗಿ ಅನುಷ್ಠಾನಗೊಳಿಸಿದ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ಬಾಕಿ ಹಣ ಬಿಡುಗಡೆಯಾಗುತ್ತದೆ

125 (131) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಮನೆಗಳ ಒಟ್ಟು ಬೇಡಿಕೆ ಎಷ್ಟು (ಕ್ಷೇತ್ರವಾರು ವಿವರ ನೀಡುವುದು) ,

ಆ) ಈವರೆಗೆ ಮಂಜೂರಾದ ಮನೆಗಳೆಷ್ಟು (ಕ್ಷೇತ್ರವಾರು ವಿವರ ನೀಡುವುದು) ?

ಶ್ರೀ ಬಿ ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಕೋರಿ ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರು / ಲೋಕಸಭಾ ಸದಸ್ಯರು, ಸ್ಥಳೀಯ ಜನಪ್ರತಿನಿಧಿಗಳು, ಸ್ಥಳೀಯ ಮೀನುಗಾರರ ಸಹಕಾರ ಸಂಘಗಳಿಂದ ಹಾಗೂ ಇತರೆ ಸಂಘ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಂದ ಮನವಿಗಳ ಮೂಲಕ ಒಟ್ಟು 47,142 ಬೇಡಿಕೆಗಳು ಬಂದಿರುತ್ತವೆ (ಕ್ಷೇತ್ರ / ತಾಲ್ಲೂಕುವಾರು ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ)

ಆ) ಈವರೆಗೆ 16,644 ಮನೆಗಳ ಮಂಜೂರಾಗಿರುತ್ತವೆ (ಕ್ಷೇತ್ರ / ತಾಲ್ಲೂಕುವಾರು ವಿವರ ಅನುಬಂಧ–2ರಲ್ಲಿ ನೀಡಲಾಗಿದೆ